ಕಂಬಳ ಸ್ಪರ್ಧೆಯ ನಿಷೇಧ

64(190); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡ ಬರುತ್ತಿರುವ ಕಂಬಳ ಸ್ಪರ್ಧೆಯನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಈ ಸ್ಪರ್ಧೆಯಿಂದ ಮಾನವರಿಗಾಗಲೀ ಅಥವಾ ಜಾನುವಾರುಗಳಿಗಾಗಲೀ ಯಾವುದಾದರೂ ತೊಂದರೆ ಇದೆಯೇ; ಈ ಸಾಂಸ್ಕೃತಿಕ ಕ್ರೀಡೆಯನ್ನು ಮುಂದುವರೆಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಟಿ.ಬಿ ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ, ಅವರ ಆದೇಶ ಸಂ. ಉನಿಉ/ ಎಡಬ್ಲ್ಯೂಬಿಐ/ಕಂಬಳ/2014–15, ದಿನಾಂಕ:14.11.2014 ರ ಪ್ರಕಾರ ಕಂಬಳ ನಿಷೇಧಿಸಿ ಆದೇಶ ಜಾರಿಗೊಳಿಸಲಾಗಿರುತ್ತದೆ

ಆ) Animal Welfare Board of India, Chennai ರವರು ಸೂಚಿಸಿದಂತೆ Prevention of Cruelty to Animals Act, 1960, Section [3]ರಂತೆ "ಕಂಬಳ" ಆಯೋಜನೆಯನ್ನು ನಿಷೇಧಿಸಿದೆ.

ಇ) Animal Welfaree Board of India, Chennai ರವರು ಜಾನುವಾರುಗಳಿಗೆ ತೊಂದರೆಯಾಗಬಹುದೆಂದು ಸೂಚಿಸಿರುವಂತೆ ಕಂಬಳ ನಿಷೇಧದ ಬಗ್ಗೆ ಉಪ ನಿರ್ದೇಶಕರು, ಪಶುಪಾಲನಾ ಮತ್ತು

ಪಶುವೈದ್ಯಕೀಯ ಸೇವೆಗಳ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ, ಅವರ ಆದೇಶ ಸಂ. ಉನಿಉ/ಎಡಬ್ಲ್ಯೂಬಿಐ/ಕಂಬಳ/2014–115, ದಿನಾಂಕ:14.11.2014 ರಂದು ಆದೇಶ ಹೊರಡಿಸಿರುತ್ತಾರೆ. ಸದರಿ ಕ್ರೀಡೆಯನ್ನು ಮುಂದುವರೆಸುವ ಯಾವುದೇ ಕ್ರಮ ಸರ್ಕಾರದ ಮುಂದೆ ಇರುವುದಿಲ್ಲ.

ಟೆಂಡರ್ ನಿಯಮಗಳಲ್ಲಿ ಅಮೂಲಾಗ್ರ ಬದಲಾವಣೆ

65(81); ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಗುಣಮಟ್ಟ ಮತ್ತು ಸಕಾಲದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಗುತ್ತಿಗೆದಾರರುಗಳಿಗೆ ಅನ್ವಯಿಸುವ ಕಟ್ಟುನಿಟ್ಟಿನ ನಿಯಮ ಮತ್ತು ಅರ್ಹತೆಗಳ ಕುರಿತು ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಗಳೇನು? ಅವುಗಳನ್ನು ಪರಿಪೂರ್ಣವಾಗಿ ಪಾಲಿಸಲಾಗುತ್ತಿದೆಯೇ?

ಆ) ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡುವ ಮುನ್ನ ವಿಧಿಸಿರುವ ನಿಯಮಗಳನ್ನು ಪಾಲನೆ ಮಾಡದಿರುವವರನ್ನು ಅನರ್ಹಗೊಳಿಸಿಸುವ ಹಾಗೂ ಅಂತಹವರನ್ನು ನಿರ್ಬಂಧಗೊಳಿಸುವ ಕುರಿತು ಸರ್ಕಾರದ ಕಟ್ಟುನಿಟ್ಟಿನ ಕ್ರಮಗಳೇನು;

ಇ) ಕಾನೂನು ನೀತಿ ನಿಯಮಗಳನ್ನು ಅನುಸರಿಸದ ಮತ್ತು ಗುಣಮಟ್ಟದ ಕಾಮಗಾರಿಗಳನ್ನು ಮಾಡದೆ ಹಣ ಪಡೆಯುವ ಗುತ್ತಿಗೆದಾರರನ್ನು ತೆಗೆದು ಹಾಕುವ ಕುರಿತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇರುವ ಅಧಿಕಾರ ವ್ಯಾಪ್ತಿಗಳೇನು;

ಈ) ಚರಂಡಿ ಕಾಮಗಾರಿಗಳು ಹಾಗೂ ರಸ್ತೆಯ ಡಾಂಬರೀಕರಣದಲ್ಲಿನ ಕಳಪೆ ಕಾಮಗಾರಿಗಳನ್ನು ಗುರುತಿಸಿ ಅಂತಹ ಗುತ್ತಿಗೆದಾರರನ್ನು